# ಹರಿದಾಸರ ಸಂಗ ದೊರಕಿತು ಎನಗೀಗ ಇನ್ನೇನಿನ್ನೇನು

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings mainly are Ref. 1. The wordings of the singer are matching with Ref. 1. The wordings in the book in Ref. 2 slightly different and are marked in yellow highlights.
4. **Note:** The wordings of the song - "varaguru upadESha neravAyitenagIga innEninnEnu" – is same as this song. In some books / websites / singers have considered both forms. But the song is same. Hence, for the convenience of the website visitors, we have listed this song under both names – haridasara sangha dorakitu …. & varaguru upadesha …..
5. **Note:** Last stanza no. 6 in yellow highlights is given only in book in Ref. 2 and the singer has also not used it. This is missing in the book in Ref.1.

ರಾಗ: ಸೌರಾಷ್ಟ್ರ ತಾಳ: ಅಟ

ಹರಿದಾಸರ ಸಂಗ ದೊರಕಿತು ಎನಗೀಗ ಇನ್ನೇನಿನ್ನೇನು
ವರಗುರು ಉಪದೇಶ ನೆರವಾಯ್ತು ಎನಗೀಗ (ನೆರವಾಯಿತೆನಗೀಗ) ಇನ್ನೇನಿನ್ನೇನು || ಪ ||

ಮಾಯದ ಸಂಸಾರ ಮಮಕಾರ ತಗ್ಗಿತು (ಹಿಂಗಿತು) ಇನ್ನೇನಿನ್ನೇನು
ತೋಯಜಾಕ್ಷನ ನಾಮ ಜಿಹ್ವೆಯೊಳ್ ನೆಲೆಸಿತು ಇನ್ನೇನಿನ್ನೇನು || ೧ ||

ಹಲವು ದೈವಗಳೆಂಬೊ ಹಂಬಲ ಬಿಟ್ಟಿತು ಇನ್ನೇನಿನ್ನೇನು
ಜಲಜನಾಭನ ಧ್ಯಾನ (ನಾಮ) ಹೃದಯದೊಳ್ ನೆಲೆಸಿತು ಇನ್ನೇನಿನ್ನೇನು || ೨ ||

ತಂದೆ ತಾಯಿ ಮುಚುಕುಂದ ವರದನಾದ ಇನ್ನೇನಿನ್ನೇನು
ಸಂದೇಹವಿಲ್ಲ ಮುಕುಂದ ದಯ ಮಾಡಿದ ಇನ್ನೇನಿನ್ನೇನು || ೩ ||

ಏನೆಂದು ಪೇಳಲಿ ಆನಂದ ಸಂಭ್ರಮ ಇನ್ನೇನಿನ್ನೇನು
ಆ ನಂದಗೋಪನ ಕಂದನ ಮಹಿಮೆಯ ಇನ್ನೇನಿನ್ನೇನು || ೪ ||

ಎನ್ನ ವಂಶಗಳೆಲ್ಲ ಪಾವನವಾದವು ಇನ್ನೇನಿನ್ನೇನು
ಚಿನ್ಮಯ ಪುರಂದರ ವಿಠಲಯ್ಯ ದೊರಕಿದ ಮೇಲಿನ್ನೇನಿನ್ನೇನು || ೫ ||

(ಕರಿರಾಜ ವರದನ ಕರುಣ ಸ್ಥಿರವಾಯಿತು ಇನ್ನೇನಿನ್ನೇನು
ನರರ ಪಾಮರರ ಸಂಗತಿಗಳ ಬಿಡಿಸಿತು ಇನ್ನೇನಿನ್ನೇನು || ೬ ||)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ವರಗುರು ಉಪದೇಶ... ವ್ಯಾಸತೀರ್ಥರಿಂದ ದೊರೆತ ಮಂತ್ರೋಪದೇಶ, ಮುದ್ರಾಂಕನ, ಕಾವ್ಯಾಂಕಿತಗಳು, ಪುರಂದರ ದಾಸರ ಹರಿದಾಸ ಜೀವನಕ್ಕೆ ಮೂಲಾಧಾರವಾದ ಪಾಥೇಯವಾದುವು. ಗುರುವಿನ ಅನುಗ್ರಹ ದೊರೆತಮೇಲೆ ಹರಿಯ ಕರುಣೆಗೆ ಯಾವ ಅಡ್ಡಿಯೂ ಇರದು. 'ಗುರುವಿನ ಒಲುಮೆ ಆಗೋತನಕ ದೊರಕೋಣಿಲ್ಲ ಮುಕುತಿ' ಎಂದು ಪುರಂದರ ದಾಸರದ್ದೇ ಒಂದು ಪದವಿದೆ. ಆದ್ದರಿಂದ ಗುರುಭಕ್ತಿಯೆನ್ನುವುದು ಪ್ರಧಾನ ಸಾಧನ. 'ಗುರುವೇ ಮುಖ್ಯನು ಕಾಣೋ ಸದ್ಗತಿಗೆ' ಎಂದು ವಿಜಯ ದಾಸರೂ ಹೇಳಿದ್ದಾರೆ.

**ತೋಯಜಾಕ್ಷನ ನಾಮ...** – ನೀರಿನಲ್ಲಿ ಹುಟ್ಟಿದ ತಾವರೆಯಂತೆ ಚೆಲುವಾದ ಕಣ್ಣುಳ್ಳವನು, ಹರಿ; ಅವನ ನಾಮ ಸ್ಮರಣೆ.

**ಹಲವು ದೈವಗಳೆಂಬ ಹಂಬಲ...** – ದಾಸರು ತಮ್ಮ ಪೂರ್ವ ಜೀವನದಲ್ಲಿ ಹರಿಯ ಸರ್ವೋತ್ತಮತ್ವವನ್ನೂ ಸರ್ವೇಶ್ವರತ್ವವನ್ನೂ ಸ್ವಾತಂತ್ರ್ಯವನ್ನೂ ಅರಿತುಕೊಳ್ಳದೆ ಹಲವಾರು ಆನುಷಂಗಿಕ ಫಲಪ್ರದಗಳಾದ ದೈವಗಳನ್ನು ನಂಬಿ ಪೂಜಿಸುತ್ತಿದ್ದರೆಂದೂ, ಈಗ ವ್ಯಾಸತೀರ್ಥರಿಂದ ತತ್ತ್ವ ತಿಳಿದುಬಂದ ಮೇಲೆ ಈ ಹಂಬಲ ತೊಲಗಿತೆಂದೂ ಹೇಳುತ್ತಾರೆ.

**ಮುಚುಕುಂದ ವರದ** – ಮಾಂಧಾತ ರಾಜನಿಗೆ ಪುರುಕುತ್ಸ, ಮುಚುಕುಂದ ಎಂಬಿಬ್ಬರು ಮಕ್ಕಳಿದ್ದುದೂ, ಮುಚುಕುಂದನು ಕೃಷ್ಣ ಭಕ್ತನಾಗಿದ್ದುದೂ ಭಾಗವತದಲ್ಲಿ ಬರುತ್ತದೆ. ದೇವ–ದೈತ್ಯರ ಸಮರದಲ್ಲಿ ದೇವತೆಗಳಿಗೆ ನೆರವಾಗಿ ವರವನ್ನು ಪಡೆದುಕೊಂಡು, ನಿದ್ರೆಯಿಂದ ಎದ್ದೊಡನೆ ಕಾಲಯಮನನ್ನು ನೋಟದಿಂದಲೇ ಸುಟ್ಟು ಕೃಷ್ಣನ ಮೆಚ್ಚುಗೆಯನ್ನು ಪಡೆದುಕೊಂಡವನು.

**ನರರ ಪಾಮರರ ಸಂಗತಿಗಳ...** – ಪಾಮರನೆಂದರೆ ಮೂರ್ಖನೆಂದು ಹೇಮಚಂದ್ರನ ವಿವರಣೆ : ಶಾಸ್ತ್ರಗಳನ್ನೋದದವನು, ಶ್ರುತಿಯ ತಾತ್ಪರ್ಯವನ್ನು ಅರಿತು ಕೊಳ್ಳದವನು. ಎಂದರೆ, ಬದುಕಿನ ಗೊತ್ತು ಗುರಿಗಳನ್ನು ತಿಳಿದುಕೊಳ್ಳದೆ ಹೊಟ್ಟೆ ಹೊರೆದುಕೊಳ್ಳುವುದು, ನೈಸರ್ಗಿಕ ಬಯಕೆಗಳನ್ನು ತೀರಿಸಿಕೊಳ್ಳುವುದು ಇಷ್ಟರಲ್ಲೇ ತೊಡಗಿರುವ ಜನರ ಸಹವಾಸವು ತಪ್ಪಿತೆಂದು ಈ ಸಾಲಿನ ಅರ್ಥ.

**ಮಮಕಾರ** = ನನ್ನದು ಎಂಬ ಭಾವ

**ನಂದಗೋಪನ ಕಂದ** = ಕೃಷ್ಣ

**Classification:** Keerthane
**Ankita:** purandara vittala

**Location:** NA

**Category:** mukti marga, jeevanoddhara

**Sub-Category:** haridasa, upadesha, maya, Vishnu, tande, tayi, nalige, hrudaya, anumana, daiva, krishna, samsara, dhyAna, muchukunda, mukunda, Ananda, gaja, karuna, nara,

**Pravachana:** NA

**Explanation:** NA